# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ.,

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮೆಸ್ಕಾಂ

MESCOM

ಕಾರ್ಪೋರೇಟ್ ಕಛೇರಿ
ಮೆಸ್ಕಾಂ ಭವನ,
ಕಾವೂರು ಅಡ್ಡ ರಸ್ತೆ, ಬಿಜೈ,
ಮಂಗಳೂರು – 575 004
CIN:U40109 KA 2002 SGC 030425

ಫೋನ್: 0824-2885718(CFO)
ಫೋನ್: 0824-2885721(DCA)
ಫ್ಯಾಕ್ಸ್:
ಇ-ಮೇಲ್ : famescom@rediffmail.com
ವೆಬ್‌ಸೈಟ್:www.mesco.in


ನಂ: ಮೆಸ್ಕಾಂ/ಮುಆಅ/ನಿ(ಕಂಹಲೆ)/ಉಲೆನಿ(ಹ)/ಲೆ(ಲೆ)/ಕ-1(ಸಿ)/ಸಿವೈಎಸ್- 17 ದಿನಾಂಕ: 25.09.2018

## ಸುತ್ತೋಲೆ

ವಿಷಯ: ಸರಕು ಮತ್ತು ಸೇವಾ ತೆರಿಗೆ ಕಾಯಿದೆಯನ್ವಯ ಮೂಲದಲ್ಲಿ ತೆರಿಗೆ ಕಡಿತಗೊಳಸುವ ಬಗ್ಗೆ

**********

ಕೇಂದ್ರ ಸರಕು ಮತ್ತು ಸೇವಾತೆರಿಗೆ ಕಾಯಿದೆಯ ಸೆಕ್ಷನ್ 51 ರ ಅನುಸಾರ, ತೆರಿಗೆ ವಿಧಿಸಬಹುದಾದ ಸರಕು ಅಥವಾ ಸೇವೆ ಅಥವಾ ಎರಡನ್ನೂ ಒಳಗೊಂಡಿರುವ ಗುತ್ತಿಗೆಯ ಮೊತ್ತವು ರೂ. 2.50 ಲಕ್ಷಗಳನ್ನು ಮೀರಿದ ಸಂದರ್ಭಗಳಲ್ಲಿ, ಪೂರೈಕೆದಾರರಿಗೆ ಪಾವತಿಸಲಾದ ಅಥವಾ ಪಾವತಿಸಲಾಗುವ ಮೊತ್ತದಿಂದ ತೆರಿಗೆಯನ್ನು ಕಡಿತಗೊಳಸುವ ಜವಾಬ್ದಾರಿಯು ಸರಕಾರೀ ಸಂಸ್ಥೆಗಳು ಅಥವಾ ಈ ಸಂಬಂಧ ಸರಕಾರದಿಂದ ಸೂಚಿಸಲಾದ ಇನ್ನಿತರ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಈ ಸೆಕ್ಷನ್‌ನ ಅನುಸಾರ ಕಡಿತಗೊಳಸಲಾದ ತೆರಿಗೆ ಮೊತ್ತವನ್ನು ತೆರಿಗೆ ಕಡಿತಗೊಳಸಿದ ನಂತರದ ತಿಂಗಳನ 10 ನೇ ದಿನಾಂಕದ ಒಳಗಾಗಿ ಸರಕಾರಕ್ಕೆ ಪಾವತಿಸುವುದರೊಂದಿಗೆ ನಿಗದಿತ ನಮೂನೆ GSTR-7 ರಲ್ಲಿ ಪೂರೈಕೆದಾರರು ಹಾಗೂ ತೆರಿಗೆ ಮೊತ್ತಗಳ ಸಂಪೂರ್ಣ ವಿವರಗಳನ್ನು ಸಲ್ಲಿಸಬೇಕಾಗಿರುತ್ತದೆ. ಅಲ್ಲದೆ, ಹುಂಡಿಯ ಮೊತ್ತ, ತೆರಿಗೆ ದರ, ಕಡಿತಗೊಳಸಲಾದ ತೆರಿಗೆ ಮೊತ್ತ ಇತ್ಯಾದಿ ವಿವರಗಳನ್ನು ಹೊಂದಿದ ದೃಢೀಕರಣವನ್ನೂ ಸಹ ತೆರಿಗೆ ಕಡಿತಗೊಳಸಿದ ಪ್ರಾಧಿಕಾರವು ಸರಕು/ಸೇವಾ ಪೂರೈಕೆದಾರರಿಗೆ ನೀಡಬೇಕಾಗಿರುತ್ತದೆ.

ಸರಕು ಮತ್ತು ಸೇವಾತೆರಿಗೆ ಕಾಯಿದೆಯ ಅನ್ವಯ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯೂ ಸಹ ತೆರಿಗೆ ಕಡಿತಗೊಳಸಿ ಸರಕಾರಕ್ಕೆ ಪಾವತಿಸುವ ಜವಾಬ್ದಾರಿಯನ್ನು ನಿರ್ವಹಿಸಲು ಬದ್ಧವಾಗಿರಬೇಕಾಗಿರುತ್ತದೆ. ಆದುದರಿಂದ ಈ ನಿಟ್ಟಿನಲ್ಲಿ ಕಂಪೆನಿ ವ್ಯಾಪ್ತಿಯ ಎಲ್ಲಾ ಲೆಕ್ಕಘಟಕಗಳಗೆ ಕಾರ್ಯಪ್ರವೃತ್ತರಾಗಲು ಅನುಕೂಲವಾಗುವಂತೆ ಕೆಳಕಂಡ ನಿರ್ದೇಶನಗಳನ್ನು ಕಡ್ಡಾಯ ಅನುಸರಣೆಗಾಗಿ ಜಾರಿಗೊಳಸಲಾಗಿದೆ.

1. ಮೂಲದಲ್ಲಿ ತೆರಿಗೆ ಕಟಾವಿಗೆ ಸಂಬಂಧಪಟ್ಟ ಸರಕು ಮತ್ತು ಸೇವಾತೆರಿಗೆ ಕಾಯಿದೆಯ ಸೆಕ್ಷನ್ 51 ನ್ನು ದಿನಾಂಕ 01.10.2018 ರಿಂದ ಅನ್ವಯವಾಗುವಂತೆ, ಸರಕಾರದ ಅಧಿಸೂಚನೆ ಸಂಖ್ಯೆ Notification No. 50/2018 – Central Tax dated 13th September, 2018 ರಲ್ಲಿ ಅಧಿಕೃತವಾಗಿ ಜಾರಿಗೊಳಸಲಾಗಿದೆ.

2. ತೆರಿಗೆ ಕಟಾಯಿಸುವ ಜವಾಬ್ದಾರಿ ಹೊಂದಿದ ಪ್ರತಿಯೊಂದು ಕಛೇರಿಯೂ ಸಹ ಜಿಎಸ್‌ಟಿ ಪೋರ್ಟಲ್‌ನಿಂದ ನೀಡಲಾದ ಅಧಿಕೃತ GST Identification Number (GSTIN) ನ್ನು ಹೊಂದಲೇಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ GSTIN ನೋಂದಾವಣೆಯನ್ನು ಪಡೆದುಕೊಳ್ಳುವಂತೆ ಈಗಾಗಲೇ ಈ ಕಛೇರಿ ಪತ್ರಸಂಖ್ಯೆ ಮೆಸ್ಕಾಂ/ಮುಆಅ/ನಿ(ಕಂಹಲೆ)/ಉಲೆನಿ(ಹ)/ಲೆ(ಲೆ)/ಕ-

AEE (IT-1/2) AO (IT) 27/09/18

F-3 1/10/18

191/10454-72 ದಿನಾಂಕ 05.02.2018 ರಲ್ಲಿ ಎಲ್ಲಾ ಲೆಕ್ಕಘಟಕಗಳಿಗೆ ನಿರ್ದೇಶನ ನೀಡಲಾಗಿದ್ದು GSTIN ನೋಂದಾವಣೆಯನ್ನು ಪಡೆದುಕೊಂಡಿರುವುದನ್ನು ಖಾತರಿ ಪಡಿಸಿಕೊಂಡು ವಿವರಗಳನ್ನು ಈ ಕಛೇರಿಗೆ ಸಲ್ಲಿಸುವುದು.

೩. ಗುತ್ತಿಗೆಯ ಮೊತ್ತವು ರೂ. 2.50 ಲಕ್ಷಗಳನ್ನು ಮೀರಿರುವ ಈ ಕೆಳಕಂಡ ಸಂದರ್ಭಗಳಲ್ಲಿ ಮೂಲದಲ್ಲಿ ತೆರಿಗೆಯನ್ನು ಕಠಾಯಿಸುವುದು ಕಡ್ಡಾಯವಾಗಿರುತ್ತದೆ.

1. ಸರಬರಾಜುದಾರರು, ಸ್ವೀಕರಿಸುವವರು ಹಾಗೂ ಸರಬರಾಜು ಸ್ಥಳಗಳು ಒಂದೇ ರಾಜ್ಯದೊಳಗೆ ಇದ್ದಾಗ.
2. ಸ್ವೀಕೃತಿದಾರರ ರಾಜ್ಯ ಹಾಗೂ ಸರಬರಾಜು ಸ್ಥಳಗಳು ಒಂದೇ ರಾಜ್ಯಗಳಲ್ಲಿ ಇದ್ದಾಗ.

ಆದಾಗ್ಯೂ ಸರಕು/ ಸೇವೆಗಳನ್ನು ಸ್ವೀಕರಿಸುವವರು ನೋಂದಾಯಿಸಲ್ಪಟ್ಟ ರಾಜ್ಯವು (Recepient's State), ಸರಬರಾಜುದಾರರ ರಾಜ್ಯ (Supplier's State) ಹಾಗೂ ಸರಬರಾಜು ಸ್ಥಳಗಳಂದ (Place of Supply) ಭಿನ್ನವಾಗಿರುವ ಸಂದರ್ಭಗಳಲ್ಲಿ ಮೂಲದಲ್ಲಿ ತೆರಿಗೆ ಕಠಾಯಿಸುವ ಅಗತ್ಯವಿರುವುದಿಲ್ಲ.

ಹೆಚ್ಚಿನ ಸ್ಪಷ್ಟತೆಗಾಗಿ ತೆರಿಗೆ ಅನ್ವಯವಾಗುವ ಪ್ರಕರಣಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:

| ವಿವರಗಳು | ಪ್ರಕರಣ –1 | ಪ್ರಕರಣ –2 | ಪ್ರಕರಣ –3 |
|---|---|---|---|
| ಸರಬರಾಜುದಾರರ ರಾಜ್ಯ | ಎ | ಎ | ಎ |
| ಸ್ವೀಕೃತಿದಾರರ ರಾಜ್ಯ | ಎ | ಬಿ | ಬಿ |
| ಸರಬರಾಜು ಸ್ಥಳ | ಎ | ಬಿ | ಎ |
| ಅನ್ವಯವಾಗುವ ತೆರಿಗೆ | ಸಿಜಿಎಸ್‌ಟಿ+ ಎಸ್‌ಜಿಎಸ್‌ಟಿ (ಎ) | ಐಜಿಎಸ್‌ಟಿ | ಸಿಜಿಎಸ್‌ಟಿ+ ಎಸ್‌ಜಿಎಸ್‌ಟಿ (ಎ) |
| ಟಿ.ಡಿ.ಎಸ್. ಅನ್ವಯವಾಗುವುದೇ? | ಹೌದು | ಹೌದು | ಇಲ್ಲ |

4. ಮೂಲದಲ್ಲಿ ತೆರಿಗೆ ಕಟಾಯಿಸುವ ಅಗತ್ಯತೆಯನ್ನು ನಿರ್ಧರಿಸಲು ಸರಬರಾಜು/ಸೇವೆಯ ಗುತ್ತಿಗೆಯ ಒಟ್ಟು ಮೊತ್ತವನ್ನು ಪರಿಗಣಿಸತಕ್ಕದ್ದೇ ವಿನಃ ಪ್ರತ್ಯೇಕ ಹುಂಡಿಗಳ ಮೊತ್ತವನ್ನು ಪರಿಗಣಿಸಿ ನಿರ್ಧರಿಸತಕ್ಕದ್ದಲ್ಲ. ದಿನಾಂಕ 01.10.2018 ರ ನಂತರ ಅಂಗೀಕರಿಸಲಾಗುವ, ಒಟ್ಟು ಗುತ್ತಿಗೆ ಮೊತ್ತವು ರೂ. 2.50 ಲಕ್ಷಗಳನ್ನು ಮೀರಿರುವ, ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ ಪ್ರಕರಣ –1 ಹಾಗೂ ಪ್ರಕರಣ –2 ಗಳ ಅಗತ್ಯತೆಯನ್ನು ಪೂರೈಸುವ ಎಲ್ಲಾ ಸರಕು/ಸೇವೆಗಳ ಹುಂಡಿಗಳಂದ ಕಡ್ಡಾಯವಾಗಿ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದು.

5. ತೆರಿಗೆ ದರಗಳು:

1. ಸಿಜಿಎಸ್‌ಟಿ ಹಾಗೂ ಎಸ್‌ಜಿಎಸ್‌ಟಿ ತೆರಿಗೆಗಳನ್ನು ವಿಧಿಸಲಾದ ಸಂದರ್ಭಗಳಲ್ಲಿ ತಲಾ 1% ರಂತೆ ಒಟ್ಟು 2% ತೆರಿಗೆಯನ್ನು ಕಡಿತಗೊಳಿಸುವುದು.
2. ಐಜಿಎಸ್‌ಟಿ ತೆರಿಗೆ ವಿಧಿಸಲಾದ ಸಂದರ್ಭಗಳಲ್ಲಿ 2% ತೆರಿಗೆಯನ್ನು ಕಡಿತಗೊಳಿಸುವುದು.

6. ಜಿಎಸ್‌ಟಿ ಕಾಯಿದೆಯಡಿ ತೆರಿಗೆ ಕಠಾಯಿಸುವ ಉದ್ದೇಶಕ್ಕಾಗಿ, ಸರಬರಾಜುದಾರರ ಇನ್ವಾಯ್ಸ್‌ಗಳಲ್ಲಿ ನೀಡಲಾದ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ, ಐಜಿಎಸ್‌ಟಿ, ಕೇಂದ್ರಾಡಳಿತ

ಪ್ರದೇಶಗಳ ತೆರಿಗೆಗಳು ಹಾಗೂ ಕಾಯಿದೆಯಡಿ ವಿಧಿಸಲಾದ ಇನ್ನಿತರ ಸೆಸ್ ಮೊತ್ತಗಳನ್ನು ಹೊರತುಪಡಿಸಲಾದ ಮೊತ್ತವನ್ನು ಪರಿಗಣಿಸತಕ್ಕದ್ದು. ಅಂದರೆ, ರೂ. 2.50 ಲಕ್ಷಗಳ ಮಿತಿಯು ಮೇಲೆ ತಿಳಿಸಿದ ತೆರಿಗೆಗಳು ಹಾಗೂ ಸೆಸ್‌ಗಳನ್ನು ಹೊರತುಪಡಿಸಿದ ಮೊತ್ತವಾಗಿರುತ್ತದೆ.

7. ಜಿಎಸ್‌ಟಿ ಕಾಯಿದೆಯಡಿ ಕಡಿತಗೊಳಿಸಲಾದ ತೆರಿಗೆ ಮೊತ್ತವನ್ನು ತೆರಿಗೆ ಕಡಿತಗೊಳಿಸಿದ ನಂತರದ ತಿಂಗಳಿನ 10 ನೇ ದಿನಾಂಕದ ಒಳಗಾಗಿ ಕಟಾವಣೆದಾರರು (Deductor) ಸರಕಾರಕ್ಕೆ ಪಾವತಿಸುವುದರೊಂದಿಗೆ ನಿಗದಿತ ನಮೂನೆ GSTR-7 ರಲ್ಲಿ ತೆರಿಗೆ ಮೊತ್ತಗಳ ಸಂಪೂರ್ಣ ವಿವರಗಳನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ವಾರ್ಷಿಕ ಶೇ. 18.00 ರ ದರದಲ್ಲಿ ವಿಳಂಬ ಶುಲ್ಕವನ್ನು ಪಾವತಿಸಬೇಕಾಗುವುದು.

8. ಕಡಿತಗೊಳಿಸಿದ ತೆರಿಗೆಯನ್ನು ಸರಕಾರದ ಖಾತೆಗೆ ಪಾವತಿಸಿದ 5 ದಿನಗಳ ಒಳಗಾಗಿ, ಹುಂಡಿಯ ಮೊತ್ತ, ತೆರಿಗೆ ದರ, ಕಡಿತಗೊಳಿಸಲಾದ ತೆರಿಗೆ ಮೊತ್ತ, ಪಾವತಿಸಲಾದ ತೆರಿಗೆ ಮೊತ್ತ ಇತ್ಯಾದಿ ವಿವರಗಳನ್ನು ಹೊಂದಿದ ದೃಢೀಕರಣವನ್ನು ತೆರಿಗೆ ಕಡಿತಗೊಳಿಸಿದ ಪ್ರಾಧಿಕಾರವು (ಕಟಾವಣೆದಾರರು) ಸರಕು/ಸೇವಾ ಪೂರೈಕೆದಾರರಿಗೆ (Deductee) ನಮೂನೆ GSTR-7A ರಲ್ಲಿ ನೀಡತಕ್ಕದ್ದು. ತಪ್ಪಿದಲ್ಲಿ, ವಿಳಂಬವಾದ ಪ್ರತೀ ದಿನಕ್ಕೆ ರೂ. 100/- ರಂತೆ ಗರಿಷ್ಟ ರೂ. 5000/- ಗಳ ಮಿತಿಗೆ ಒಳಪಟ್ಟು ದಂಡವನ್ನು ಪಾವತಿಸಬೇಕಾಗುವುದು.

9. ಪ್ರತೀ ತಿಂಗಳು ಕಡಿತಗೊಳಿಸಲಾದ ತೆರಿಗೆ ಮೊತ್ತಗಳನ್ನು ಸರಕಾರದ ಖಾತೆಗೆ ಪಾವತಿಸಿ ಮಾಸಿಕ ಸಲ್ಲಿಕೆಗಳನ್ನು ನಿಗದಿತ ದಿನಾಂಕದ ಒಳಗಾಗಿ ಸಲ್ಲಿಸಲು ಅನುಕೂಲವಾಗುವಂತೆ ಕಡಿತಗೊಳಿಸಲಾದ ತೆರಿಗೆ ವಿವರಗಳನ್ನು ಈ ಸುತ್ತೋಲೆಗೆ ಲಗತ್ತಿಸಿದ ನಮೂನೆಯಲ್ಲಿ **(Annexure-1)** ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಿ ನಿರ್ವಹಿಸುವುದು.

10. ಸರಕು/ಸೇವಾ ಸರಬರಾಜುದಾರರ ಹುಂಡಿಗಳಿಂದ ಕಡಿತಗೊಳಿಸಬೇಕಾದ ತೆರಿಗೆ ಮೊತ್ತಗಳನ್ನು ದಾಖಲಿಸಿ ಪಾವತಿಸುವ ಸಲುವಾಗಿ ಪ್ರತ್ಯೇಕ ಲೆಕ್ಕಶೀರ್ಷಿಕೆಗಳನ್ನು ನೀಡಲಾಗಿದೆ. ಹುಂಡಿಗಳಿಂದ ಕಡಿತಗೊಳಿಸಿದ ಎಸ್‌ಜಿಎಸ್‌ಟಿ, ಸಿಜಿಎಸ್‌ಟಿ ಹಾಗೂ ಐಜಿಎಸ್‌ಟಿ ಮೊತ್ತಗಳನ್ನು ಕ್ರಮವಾಗಿ ಲೆಕ್ಕಶೀರ್ಷಿಕೆ 46.936, 46.937 ಹಾಗೂ 46.938 ಗಳಿಗೆ ಜಮೆ ನೀಡುವುದು ಹಾಗೂ ಪಾವತಿ ಸಂದರ್ಭಗಳಲ್ಲಿ ಇದೇ ಲೆಕ್ಕಶೀರ್ಷಿಕೆಗಳಿಗೆ ಖರ್ಚು ದಾಖಲಿಸಿ ಶಿಲ್ಕುಗಳನ್ನು ಶೂನ್ಯಗೊಳಿಸುವುದು.

11. **ಪ್ರತೀ ತಿಂಗಳೂ ಕಡಿತಗೊಳಿಸಲಾದ ತೆರಿಗೆಗಳ ಪಾವತಿಗೆ ಅಗತ್ಯವಿರುವ ನಿಧಿ ಕೋರಿಕೆಯನ್ನು ನಂತರದ ತಿಂಗಳ 2ನೇ ದಿನಾಂಕದ ಒಳಗಾಗಿ ಕಾರ್ಪೋರೇಟ್ ಕಛೇರಿಯ ಸಂಪನ್ಮೂಲ ಶಾಖೆಗೆ ಸಲ್ಲಿಸತಕ್ಕದ್ದು.**

12. **ಕಡಿತಗೊಳಿಸಲಾದ ತೆರಿಗೆಯನ್ನು ಸರಕಾರಕ್ಕೆ ಪಾವತಿಸುವ ವಿಧಾನ:**
ಜಿಎಸ್‌ಟಿ ಕಾಯಿದೆಯಡಿ ಕಡಿತಗೊಳಿಸಲಾದ ತೆರಿಗೆ ಮೊತ್ತವನ್ನು ಕೆಳಕಂಡ 2 ವಿಧಾನಗಳಲ್ಲಿ ಸರಕಾರದ ಖಾತೆಗೆ ಪಾವತಿಸಬಹುದಾಗಿರುತ್ತದೆ.
    1. ಪ್ರತಿಯೊಂದು ಹುಂಡಿಗೂ ಪ್ರತ್ಯೇಕ ಚಲನ್ ತಯಾರಿಸಿ ಪಾವತಿಸುವುದು.
    2. ಕಡಿತಗೊಳಿಸಿದ ತೆರಿಗೆ ಮೊತ್ತಗಳನ್ನು ಒಟ್ಟಾಗಿ ನಿಗದಿತ ಕಾಲಾಂತರಗಳಲ್ಲಿ ಪಾವತಿಸುವುದು.

ಕಂಪೆನಿಯ ಲೆಕ್ಕಘಟಕಗಳಲ್ಲಿ ಪ್ರತೀ ತಿಂಗಳೂ ಹೆಚ್ಚಿನ ಸಂಖ್ಯೆಯ ಸರಬರಾಜು ಹುಂಡಿಗಳನ್ನು ಅಂಗೀಕರಿಸಲಾಗುವುದರಿಂದ ತೆರಿಗೆ ಪಾವತಿಸಲು ಮೇಲೆ ತಿಳಿಸಿದ 2ನೇ ವಿಧಾನವನ್ನು ಅನುಸರಿಸುವುದು.

ತೆರಿಗೆ ಪಾವತಿಗೆ ಸಂಬಂಧಪಟ್ಟಂತೆ F.No.S.31011/11/2018-ST-I-DoR, New Delhi, Dated the 14th September, 2018 ರಲ್ಲಿ ಸರಕಾರದಿಂದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಸದರಿ ಅಧಿಸೂಚನೆಯ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.

13. ಹೆಚ್ಚುವರಿಯಾಗಿ ಅಥವಾ ತಪ್ಪಾಗಿ ಕಡಿತಗೊಳಿಸಲಾಗಿ ಎಲೆಕ್ಟ್ರಾನಿಕ್ ಕ್ಯಾಷ್ ಲೆಡ್ಜರ್‌ನಲ್ಲಿ ಜಮೆಗೊಳಿಸಲಾದ ತೆರಿಗೆ ಮೊತ್ತವನ್ನು ಯಾವುದೇ ಸಂದರ್ಭದಲ್ಲಿ ಹಿಂತಿರುಗಿಸಲಾಗುವುದಿಲ್ಲ. ಆದುದರಿಂದ ತೆರಿಗೆ ಕಡಿತಗೊಳಿಸುವ ಅಧಿಕಾರಿಗಳು ಅತ್ಯಂತ ಜಾಗರೂಕರಾಗಿರುವಂತೆ ತಿಳಿಯಪಡಿಸಿದೆ.

ಸರಕು ಮತ್ತು ಸೇವಾ ತೆರಿಗೆ ಕಾಯಿದೆಯನ್ವಯ ಮೂಲದಲ್ಲಿ ತೆರಿಗೆ ಕಡಿತಗೊಳಿಸಿ ಸರಕಾರಕ್ಕೆ ಪಾವತಿಸುವ ನಿಟ್ಟಿನಲ್ಲಿ ಮೇಲೆ ನೀಡಲಾದ ನಿರ್ದೇಶನಗಳನ್ನು ತಪ್ಪದೇ ಅನುಸರಿಸುವಂತೆ ಹಾಗೂ ಕಂಪೆನಿಗೆ ಯಾವುದೇ ರೀತಿಯ ನಷ್ಟಗಳು ಸಂಭವಿಸದಂತೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವಂತೆ ತಿಳಿಯಪಡಿಸಿದೆ.

ಮುಖ್ಯ ಆರ್ಥಿಕ ಅಧಿಕಾರಿ
ಮ.ವಿ.ಸ.ಕಂ, ಮಂಗಳೂರು.

ಪ್ರತಿಗಳು :

1. ಆರ್ಥಿಕ ಸಲಹೆಗಾರರು (ಆಂ.ಪ), ಮ.ವಿ.ಸ.ಕಂ., ಕಾರ್ಪೋರೇಟ್ ಕಛೇರಿ, ಮಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಕಾ& ಪಾ ವಲಯ, ಮ.ವಿ.ಸ.ಕಂ, ಮಂಗಳೂರು/ಶಿವಮೊಗ್ಗ.
3. ನಿಯಂತ್ರಣಾಧಿಕಾರಿ (ಕಂಹಲೆ), ಮ.ವಿ.ಸ.ಕಂ., ಕಾರ್ಪೋರೇಟ್ ಕಛೇರಿ, ಮಂಗಳೂರು.
4. ನಿಯಂತ್ರಣಾಧಿಕಾರಿ, ಕಾ& ಪಾ ವಲಯ, ಮ.ವಿ.ಸ.ಕಂ, ಮಂಗಳೂರು/ಶಿವಮೊಗ್ಗ.
5. ಅಧೀಕ್ಷಕ ಇಂಜಿನಿಯರ್(ವಿ),(ತಾಂ)/(ವಾ)/(ಖ)/(ಪ್ರಾಜೆಕ್ಟ್ಸ್),ಮ.ವಿ.ಸ.ಕಂ,ಕಾರ್ಪೋರೇಟ್ ಕಛೇರಿ.
6. ಅಧೀಕ್ಷಕ ಇಂಜಿನಿಯರ್ (ವಿ), ಎಲ್ಲಾ ಕಾರ್ಯ ಮತ್ತು ಪಾಲನಾ ವೃತ್ತಗಳು, ಮ.ವಿ.ಸ.ಕಂ.
7. ಅಧೀಕ್ಷಕ ಇಂಜಿನಿಯರ್(ವಿ),ಮಾ.ಸಂ.ಅ.ಕೇಂದ್ರ,ಮ.ವಿ.ಸ.ಕಂ.,ಮರೋಳಿ,ಕುಲಶೇಖರ,ಮಂಗಳೂರು.
8. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ)/(ಸಿ), ಮ. ವಿ. ಸ. ಕಂ, ಕಾರ್ಪೋರೇಟ್ ಕಛೇರಿ.
9. ಉಪಲೆಕ್ಕನಿಯಂತ್ರಣಾಧಿಕಾರಿಗಳು (ಹ)/(ಇಬಿಸಿ&ಟಿ)/(ಕಂ), ಮ.ವಿ.ಸ.ಕಂ.,ಕಾರ್ಪೋರೇಟ್ ಕಛೇರಿ.
10. ಉಪಲೆಕ್ಕನಿಯಂತ್ರಣಾಧಿಕಾರಿಗಳು ಎಲ್ಲಾ ಕಾರ್ಯ ಮತ್ತು ಪಾಲನಾ ವೃತ್ತಗಳು, ಮ.ವಿ.ಸ.ಕಂ.
11. ಉಪಲೆಕ್ಕನಿಯಂತ್ರಣಾಧಿಕಾರಿ,ಮಾ.ಸಂ.ಅ.ಕೇಂದ್ರ, ಮ.ವಿ.ಸ.ಕಂ.,ಮರೋಳಿ,ಕುಲಶೇಖರ,ಮಂಗಳೂರು.
12. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮ.ವಿ.ಸ.ಕಂ, ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
13. ಲೆಕ್ಕಾಧಿಕಾರಿಗಳು, ಮ.ವಿ.ಸ.ಕಂ, ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು/ ವೃತ್ತಗಳು/ವಲಯಗಳು/ ಕಾರ್ಪೋರೇಟ್ ಕಛೇರಿ.
14. ಲೆಕ್ಕಾಧಿಕಾರಿಗಳು (ಆಂ.ಪ), ಮ.ವಿ.ಸ.ಕಂ, ಕಾರ್ಪೋರೇಟ್ ಕಛೇರಿ & ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳು.
15. ಆಪ್ತ ಕಾರ್ಯದರ್ಶಿಗಳು ವ್ಯ.ನಿ/ನಿ(ತಾಂ), ಪ್ರ.ವ್ಯ. (ಆ&ಮಾ.ಸಂ.ಅ), ಮ.ವಿ.ಸ.ಕಂ, ಮಂಗಳೂರು.
16. ಕ.ಪ್ರ./ಮು.ಕ.

# MANGALORE ELECTRICITY SUPPLY COMPANY LIMITED

## DETAILS OF GST DEDUCTED AT SOURCE DURING THE MONTH OF ...........

Annexure-1

**Name of the Accounting Unit:**

| Sl. No | GSTIN of the deductee (in case of Registered dealer) | Name of the deductee (in case of Un-Registered dealer) | Invoice No/ date | B.R. No/ date | J.V. No/ date | Total Invoice Value | Amount on which tax is deducted | TDS under SGST | TDS under CGST | TDS under IGST | **Total TDS under GST** |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| **TOTAL** | | | | | | | | | | | |

**Sr. Asst./Asst. Acounts Officer**

**Acounts Officer/DCA**